# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** ಯೋಜನಾ ಇಲಾಖೆಯ ಹಿರಿಯ ನಿರ್ದೇಶಕರಾಗಿ ನಿವೃತ್ತಿ ಹೊಂದಿರುವ ಶ್ರೀ ಎಂ.ಎ.ಪ್ರಕಾಶ್‌ರವರನ್ನು ಯೋಜನಾ ಇಲಾಖೆಗೆ ಸಮಾಲೋಚಕರನ್ನಾಗಿ ನೇಮಿಸುವ ಬಗ್ಗೆ.

**ಓದಲಾಗಿದೆ:**

1. ಆರ್ಥಿಕ ಇಲಾಖೆಯ ದಿನಾಂಕ: 14-06-2012ರ ಹಿಂಬರಹ ಸಂಖ್ಯೆ ಆಇ 515 ವೆಚ್ಚ 12/2012.
2. ಆರ್ಥಿಕ ಇಲಾಖೆಯ ದಿನಾಂಕ: 14.6.2012ರ ಅಧಿಸೂಚನೆ ಸಂಖ್ಯೆ ಆಇ 515 ವೆಚ್ಚ 12/2012.

**ಪ್ರಸ್ತಾವನೆ:**

ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು 2010-11ನೇ ಸಾಲಿನಿಂದ ಆರ್ಥಿಕ ಸಮೀಕ್ಷೆಯನ್ನು ಮರುವಿನ್ಯಾಸಗೊಳಿಸುವ ಕೆಲಸವನ್ನು ಕೈಗೊಂಡಿದ್ದು, ಕರ್ನಾಟಕ ಮೌಲ್ಯಮಾಪನ ಪ್ರಾಧಿಕಾರವು 2010-11ನೇ ಸಾಲಿನ ಆರ್ಥಿಕ ಸಮೀಕ್ಷೆಯನ್ನು ನೂತನ ವಿನ್ಯಾಸಗೊಳಿಸಿ ಹೊರತಂದ ಸಂಪೂರ್ಣ ಜವಾಬ್ದಾರಿಯನ್ನು ಸಮನ್ವಯಗೊಳಿಸಿರುತ್ತದೆ. ಹಿಂದಿನ ವರ್ಷಗಳ ಆರ್ಥಿಕ ಸಮೀಕ್ಷೆಯಂತೆ, 2011-12ನೇ ಸಾಲಿನ ಆರ್ಥಿಕ ಸಮೀಕ್ಷೆಯನ್ನು ಮತ್ತೊಮ್ಮೆ ಮರುವಿನ್ಯಾಸಗೊಳಿಸಲಾಗಿದ್ದು, ಈ ಸಂಬಂಧ, ಎಲ್ಲಾ ಇಲಾಖೆಗಳ ಮತ್ತು ಯೋಜನಾ ಇಲಾಖೆಯ ವೃತ್ತಿ ನಿರತ ವಿಭಾಗಗಳ ಹಾಗೂ ವಿಷಯ ತಜ್ಞರ ನಡುವೆ ಉತ್ತಮ ಸಮನ್ವಯ ಇರಬೇಕಾಗುತ್ತದೆ. ರಾಜ್ಯದ ಒಟ್ಟಾರೆ ಪ್ರಗತಿಯ ಅಂಕಿ-ಅಂಶಗಳನ್ನು ಮತ್ತು ಮುಖ್ಯಾಂಶಗಳನ್ನು ಇನ್ನೂ ಉತ್ತಮವಾಗಿ ವಿಶ್ಲೇಷಿಸಲು ಗಮನ ಕೊಡಬೇಕಾಗಿದೆ. ಪ್ರಗತಿಯ ಅಂಕಿ-ಅಂಶಗಳನ್ನು ಮತ್ತು ಮುಖ್ಯಾಂಶಗಳ ವಿಶ್ಲೇಷಣೆಯನ್ನು ಉತ್ತಮವಾಗಿ ಪ್ರಸ್ತುತಪಡಿಸಲು ನುರಿತ ವಿಷಯ ತಜ್ಞರ ಸೇವೆಯನ್ನು ಪಡೆಯಬೇಕಾಗಿರುತ್ತದೆ.

ಕೇಂದ್ರ ಸರ್ಕಾರವು ಅಭಿವೃದ್ಧಿಪಡಿಸಿರುವ ಫಲಿತಾಂಶ ದಾಖಲೆ ಚೌಕಟ್ಟು (RFD) ಮುಖಾಂತರ ಯೋಜನೆಗಳನ್ನು ಫಲಶ್ರುತಿಯ ಆಧಾರದ ಮೇಲೆ ಸಂಯೋಜಿಸುತ್ತಿರುವ ರಾಜ್ಯಗಳ ಪೈಕಿ ಕರ್ನಾಟಕವು ಒಂದಾಗಿದೆ. ವಿಶ್ವಬ್ಯಾಂಕ್ ಸಹಯೋಗದಡಿಯಲ್ಲಿ ಹೊಸ ಪ್ರಾಯೋಗಿಕ ಯೋಜನೆಯನ್ನು ಸರ್ಕಾರಿ ಇಲಾಖೆಗಳು ಪರಿಣಾಮಕಾರಿಯಾದ ಫಲಿತಾಂಶ ಅಳತೆಗೋಲುಗಳ ಮುಖಾಂತರ ಉತ್ತಮ ಪ್ರಗತಿಯನ್ನು ಸಾಧಿಸಲು ಸಂಘಟನಾ ಸಾಮರ್ಥ್ಯವನ್ನು ವೃದ್ಧಿಗೊಳಿಸಬೇಕಾಗಿರುತ್ತದೆ. ಇತರೆ ದೇಶಗಳ ಉತ್ತಮ ಕಾರ್ಯಪ್ರವೃತ್ತಿಯನ್ನು ಅಳವಡಿಸಿಕೊಳ್ಳುವುದರ ಮುಖಾಂತರ ಸಾರ್ವಜನಿಕ ವೆಚ್ಚದ ಮಹತ್ವವನ್ನು ಹೆಚ್ಚಿಸುವ ಈ ಸಂಬಂಧ ಯೋಜನಾ ಇಲಾಖೆಯು Karnataka Performance Management Systems Reforms Project (KPMSRP) ನ್ನು 2012ನೇ ಜೂನ್ ಮಾಹೆಯಿಂದ ಅನುಷ್ಠಾನಗೊಳಿಸಲು ಪ್ರಾರಂಭಿಸಿದೆ. ಈ ಕಾರ್ಯಕ್ರಮಕ್ಕೆ ವಿಶ್ವಬ್ಯಾಂಕ್ ಅನುದಾನ ಒದಗಿಸಿರುತ್ತದೆ ಮತ್ತು ಇದು ಐದು ವರ್ಷಗಳ ಕಾರ್ಯಕ್ರಮವಾಗಿದ್ದು, ಮೊದಲನೇ ಹಂತದಲ್ಲಿ ಇದನ್ನು ಐದು ಇಲಾಖೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಅವುಗಳೆಂದರೆ ಶಿಕ್ಷಣ, ಆರೋಗ್ಯ, ತೋಟಗಾರಿಕೆ, ಗ್ರಾಮೀಣಾಭಿವೃದ್ಧಿ ಮತ್ತು ಲೋಕೋಪಯೋಗಿ ಇಲಾಖೆಗಳಾಗಿರುತ್ತವೆ.

ಆರ್ಥಿಕ ಸಮೀಕ್ಷೆ ಮತ್ತು Karnataka Performance Management Systems Reforms Project (KPMSRP) ನ ಕಾರ್ಯಚಟುವಟಿಕೆಗಳ ಸಮನ್ವಯಕ್ಕಾಗಿ ಅನುಭವವುಳ್ಳ ವ್ಯಕ್ತಿಯೊಬ್ಬರನ್ನು ಸಮಾಲೋಚಕರನ್ನಾಗಿ ನೇಮಿಸುವ ಅವಶ್ಯಕತೆ ಯೋಜನಾ ಇಲಾಖೆಯಲ್ಲಿ ಕಂಡುಬಂದಿರುತ್ತದೆ.

ಯೋಜನಾ ಇಲಾಖೆಯ ಪಿ.ಎಫ್.ಆರ್ ವಿಭಾಗದ ಹಿರಿಯ ನಿರ್ದೇಶಕರಾಗಿದ್ದ ಶ್ರೀ ಎಂ.ಎ. ಬಾಸಿತ್ ರವರು ದಿನಾಂಕ:31.05.2012 ರಂದು ಹಿರಿಯ ನಿರ್ದೇಶಕರ ಹುದ್ದೆಯಿಂದ ವಯೋನಿವೃತ್ತಿ ಹೊಂದಿರುತ್ತಾರೆ. ಶ್ರೀ ಎಂ.ಎ. ಬಾಸಿತ್ ರವರು ನಿರ್ದೇಶಕರಾಗಿ ಮತ್ತು ಹಿರಿಯ ನಿರ್ದೇಶಕರಾಗಿ ಉನ್ನತ ಮಟ್ಟದ ಸ್ಥಾನದಲ್ಲಿ ಹಲವಾರು ವರ್ಷಗಳ ಕಾಲ ಯೋಜನಾ ಇಲಾಖೆಯಲ್ಲಿ ಸೇವೆ ಸಲ್ಲಿಸಿರುತ್ತಾರೆ. ಇವರು ವಾರ್ಷಿಕ ಯೋಜನೆ ಮತ್ತು ಪಂಚವಾರ್ಷಿಕ ಯೋಜನೆಗಳನ್ನು ರೂಪಿಸುವ ಮತ್ತು ಆರ್ಥಿಕ ಸಮೀಕ್ಷೆ ರಚನೆಯ ಸಂಪೂರ್ಣ ಕಾರ್ಯವನ್ನು ಹಲವಾರು ವರ್ಷಗಳಿಂದ ಯಶಸ್ವಿಯಾಗಿ ಸಂಘಟಿಸಿರುತ್ತಾರೆ.

ಮೇಲ್ಕಂಡ ಕಂಡಿಕೆಗಳಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಎಂ.ಎ. ಬಾಸಿತ್ ರವರನ್ನು ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಟ್ಟು 2 ವರ್ಷಗಳ ಅವಧಿಗೆ ರಾಜ್ಯ ಯೋಜನಾ ಮಂಡಳಿ ಹಾಗೂ ಯೋಜನಾ ಇಲಾಖೆಯ ಸಮಾಲೋಚಕರನ್ನಾಗಿ ನೇಮಿಸಲು ಯೋಜನಾ ಇಲಾಖೆಯು ಪ್ರಸ್ತಾಪಿಸಿದೆ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ – 1999ರ ಕಲಂ 4(ಜಿ) ರಡಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆಗೆ ಪಾರದರ್ಶಕತೆ ಕಾಯ್ದೆಯಿಂದ ಆರ್ಥಿಕ ಇಲಾಖೆಯು ವಿನಾಯಿತಿ ನೀಡಿ ಶ್ರೀ ಎಂ.ಎ. ಬಾಸಿತ್‌ರವರನ್ನು ಯೋಜನಾ ಇಲಾಖೆಯ ಸಮಾಲೋಚಕರನ್ನಾಗಿ ಮಾಹೆಯಾನ ರೂ.70,000/-ಗಳ ಸಮಾಲೋಚನಾ ಶುಲ್ಕದೊಂದಿಗೆ ನೇಮಕಾತಿ ಮಾಡಿಕೊಳ್ಳಲು ಸಹಮತಿ ನೀಡಿ, ಉತ್ತಮ ಗುಣಮಟ್ಟದ ಸೇವೆಯನ್ನು ಸಮಂಜಸ ದರದಲ್ಲಿ ಸಂಗ್ರಹಿಸುವುದನ್ನು ಇಲಾಖೆಯು ದೃಢಪಡಿಸಿಕೊಳ್ಳುವಂತೆ ಉಲ್ಲೇಖ (2)ರ ದಿನಾಂಕ: 14.06.2012ರ ಆದೇಶದಲ್ಲಿ ಸೂಚಿಸಿರುತ್ತದೆ. ಪ್ರಸ್ತಾವನೆಗೆ ಆರ್ಥಿಕ ಇಲಾಖೆಯು ಉಲ್ಲೇಖ (1)ರ ಹಿಂಬರಹದಲ್ಲಿ ಸಹಮತಿ ನೀಡಿ ಸಮಾಲೋಚನಾ ಶುಲ್ಕವನ್ನು ಒಂದು ವರ್ಷದ ನಂತರ ಶೇಕಡ 10ರಂತೆ ಪರಿಷ್ಕರಿಸಲು ಅನುಮೋದಿಸಿರುತ್ತದೆ.

ಅದರಂತೆ ಈ ಆದೇಶ

**ಸರ್ಕಾರದ ಆದೇಶ ಸಂಖ್ಯೆ: ಪಿಡಿ 28 ಎಸ್‌ಪಿಪಿ 2012**
**ಬೆಂಗಳೂರು, ದಿನಾಂಕ: 14-06-2012.**

ಯೋಜನಾ ಇಲಾಖೆಯಲ್ಲಿ ಹಿರಿಯ ನಿರ್ದೇಶಕರಾಗಿ ನಿವೃತ್ತಿ ಹೊಂದಿರುವ ಶ್ರೀ ಎಂ.ಎ. ಬಾಸಿತ್ ರವರನ್ನು ಕೆಳಕಂಡ ಷರತ್ತು ಮತ್ತು ನಿಬಂಧನೆಗೊಳಪಟ್ಟು ಯೋಜನಾ ಇಲಾಖೆ ಹಾಗೂ ರಾಜ್ಯ ಯೋಜನಾ ಮಂಡಳಿಯ ಸಮಾಲೋಚಕರನ್ನಾಗಿ ದಿನಾಂಕ: 14.06.2012ರಿಂದ ಜಾರಿಗೆ ಬರುವಂತೆ ನೇಮಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಅ) ಸದರಿ ನೇಮಕಾತಿಯು ಎರಡು ವರ್ಷದ ಅವಧಿಯದಾಗಿದ್ದು, ಪ್ರತಿ ಮಾಹೆಯಾನ ರೂ.70,000/-ಗಳ ಸಮಾಲೋಚನಾ ಶುಲ್ಕವನ್ನು ನೀಡಲಾಗುವುದು.

ಆ) ನಿಗದಿತ ಸಮಾಲೋಚನಾ ಶುಲ್ಕವನ್ನು ಒಂದು ವರ್ಷದ ನಂತರ ಶೇಕಡ10ರಂತೆ ಪರಿಷ್ಕರಿಸಲಾಗುವುದು.

ಇ) ಇವರಿಗೆ ಸರ್ಕಾರದ ಹಿರಿಯ ಗ್ರೂಪ್-ಎ ಅಧಿಕಾರಿಗಳಿಗೆ ನೀಡಲಾಗುವ ಸೌಲಭ್ಯವನ್ನು ಒದಗಿಸಲಾಗುವುದು.

ಈ) ಇವರಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ದಿನಾಂಕ: 12.9.2006ರ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 139 ಹಿವೇಸೇ 2004ರಂತೆ ಹೊರಗುತ್ತಿಗೆ ಆಧಾರದ ಮೇಲೆ ವಾಹನ ಸೌಲಭ್ಯವನ್ನು ಒದಗಿಸಲಾಗುವುದು.

ಉ) ಇವರು, ಯೋಜನೆಗಳನ್ನು ರೂಪಿಸುವ ಮತ್ತು ಹಾಲಿ ರಾಜ್ಯದಲ್ಲಿರುವ Karnataka Performance Management Systems Reforms Project (KPMSRP) ಅಡಿಯಲ್ಲಿ ಸಂಯೋಜನಾ ಮತ್ತು ಮೌಲ್ಯಮಾಪನವನ್ನು ಬಲಗೊಳಿಸುವ ಸಂಬಂಧ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ಸಂಘಟಿಸುವ ಕಾರ್ಯ ನಿರ್ವಹಿಸಬೇಕು ಹಾಗೂ 12ನೇ ಪಂಚವಾರ್ಷಿಕ ಯೋಜನೆಯ ಅಪ್ರೋಚ್ ಪೇಪರ್‌ಗೆ ಸಂಬಂಧಿಸಿದ ಎಲ್ಲಾ ಕಾರ್ಯಗಳನ್ನು ನಿರ್ವಹಿಸಬೇಕು.

ಊ) ಇವರು, ಆರ್ಥಿಕ ಸಮೀಕ್ಷೆಯನ್ನು ತಯಾರಿಸುವ ಕೆಲಸವನ್ನು ಸಮನ್ವಯಗೊಳಿಸುವುದು. ಎಲ್ಲಾ ಇಲಾಖೆಗಳೊಂದಿಗೆ ಮತ್ತು ಯೋಜನಾ ಇಲಾಖೆಯ ಕಾರ್ಯನಿರತ ವಿಭಾಗಗಳು, ರಾಜ್ಯ ಯೋಜನಾ ಮಂಡಳಿ ಹಾಗೂ ವಿಷಯ ತಜ್ಞರೊಂದಿಗೆ ನಿರಂತರ ಸಮಾಲೋಚನೆಯೊಂದಿಗೆ ಆರ್ಥಿಕ ಸಮೀಕ್ಷೆಯನ್ನು ಮರುವಿನ್ಯಾಸಗೊಳಿಸಬೇಕು.

ಋ) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಹಾಗೂ ರಾಜ್ಯ ಯೋಜನಾ ಮಂಡಳಿಯ ಪದನಿಮಿತ್ತ ಸದಸ್ಯ ಕಾರ್ಯದರ್ಶಿಗಳು ವಹಿಸುವ ಎಲ್ಲಾ ಕೆಲಸಗಳನ್ನು ಇವರು ನಿರ್ವಹಿಸಬೇಕು.

ಎ) ಇವರು ಬೇರೆ ಯಾವುದೇ ಸಮಾಲೋಚನಾ ಕಾರ್ಯವನ್ನು ನಿರ್ವಹಿಸತಕ್ಕದ್ದಲ್ಲ ಮತ್ತು ಸರ್ಕಾರದ ಗೌಪ್ಯತೆಗಳನ್ನು ಕಾಪಾಡತಕ್ಕದ್ದು.

(ಏ) ಇವರ ಸೇವೆಯು ತೃಪ್ತಿದಾಯಕ ಎಂದು ಕಂಡುಬಂದಲ್ಲಿ ಮಾತ್ರ ಇವರ ಸೇವೆಯನ್ನು ಮುಂದುವರಿಸಲಾಗುವುದು.

ಮೇಲ್ಕಂಡ ವೆಚ್ಚವನ್ನು ರಾಜ್ಯ ಯೋಜನಾ ಮಂಡಳಿಯ 2012-13ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ "3451-00-101-4-00 (ಯೋಜನೇತರ)" ಅಡಿಯಲ್ಲಿ ಭರಿಸಲಾಗುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ದಿನಾಂಕ: 14.6.2012ರ ಅಧಿಸೂಚನೆ ಸಂಖ್ಯೆ ಆಇ 515 ವೆಚ್ಚ 12/2012ರ ಆದೇಶ ಹಾಗೂ ದಿನಾಂಕ: 14-06-2012ರ ಹಿಂಬರಹ ಸಂಖ್ಯೆ ಆಇ 515 ವೆಚ್ಚ 12/2012ರಲ್ಲಿ ನೀಡಿರುವ ಸಹಮತಿ ಮೇರೆಗೆ ಹಾಗೂ ದಿನಾಂಕ: 17.5.1997ರ ಸರ್ಕಾರದ ಆದೇಶದ ಸಂಖ್ಯೆ ಪಿಡಿ 113 ಎಸ್‌ಪಿಎಂ 96ರಲ್ಲಿ ರಾಜ್ಯ ಯೋಜನಾ ಮಂಡಳಿಯ ಸದಸ್ಯ ಕಾರ್ಯದರ್ಶಿಗಳಿಗೆ ಪ್ರದತ್ತವಾಗಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

E Shalbai 14/6/2012

(ಉಷಾಬಾಯಿ)
ಸರ್ಕಾರದ ಅಧೀನ ಕಾರ್ಯದರ್ಶಿ-3,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು

2. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು, ವಿಧಾನಸೌಧ, ಬೆಂಗಳೂರು.
3. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು.
4. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯೋಜನಾ ಇಲಾಖೆ.
6. ಸರ್ಕಾರದ ಉಪ ಕಾರ್ಯದರ್ಶಿಗಳು (ಆಡಳಿತ), ಯೋಜನಾ ಇಲಾಖೆ
7. ಹಿರಿಯ ನಿರ್ದೇಶಕರು (ಪ್ರಭಾರ), ಪಿಎಫ್‌ಆರ್ ವಿಭಾಗ, ಯೋಜನಾ ಇಲಾಖೆ
8. ಸಂಶೋಧನಾ ಸಮಾಲೋಚಕರು ಹಾಗೂ ಅಪರ ಕಾರ್ಯದರ್ಶಿಗಳು, ರಾಜ್ಯ ಯೋಜನಾ ಮಂಡಳಿ, ಬಹುಮಹಡಿಗಳ ಕಟ್ಟಡ.
9. ಸಲಹೆಗಾರರು, ಯೋಜನಾ ಇಲಾಖೆ.
10. ಖಜಾನೆ ಅಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
11. ಸಹಾಯಕ ಖಜಾನಾಧಿಕಾರಿ, ರಾಜ್ಯ ಯೋಜನಾ ಮಂಡಳಿ.
11. ಶ್ರೀ ಎಂ.ಎ.ಬಾಸಿತ್, ನಿವೃತ್ತ ಹಿರಿಯ ನಿರ್ದೇಶಕರು, ಯೋಜನಾ ಇಲಾಖೆ, ಬೆಂಗಳೂರು.
12. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.